RNU AIR DHARWAD

AUGUST 31, 2025

# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ರಾಜ್ಯಾದ್ಯಂತ ನಿರಂತರ ಮಳೆ; ಧಾರವಾಡ ಜಿಲ್ಲೆಯಲ್ಲಿ, ಅಂದಾಜು, 1 ಲಕ್ಷ ಹೆಕ್ಟರ್ ಬೆಳೆ ನಾಶ.**
- **ಸೆಪ್ಟೆಂಬರ್ 13 ರಿಂದ 16ರ ವರೆಗೆ, ಧಾರವಾಡ, ಕೃಷಿ ಮೇಳ.**
- **ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಉಡುಪು ಮತ್ತು ವಸ್ತ್ರ ವಿಜ್ಞಾನ ವಿಭಾಗಕ್ಕೆ, ಬಾಳೆ ದಿಂಡಿನ ಮೌಲ್ಯವರ್ಧನೆಗೆ, 'ಪೇಟೆಂಟ್' ಗರಿ.**
- **ಪ್ರಧಾನಮಂತ್ರಿ ಮೋದಿ ಅವರಿಂದ, ಇಂದು ಬೆಳಗ್ಗೆ 11 ಗಂಟೆಗೆ, ಆಕಾಶವಾಣಿ ಮೂಲಕ, 'ಮನ್ ಕಿ ಬಾತ್'.**

<><><>

**ಈಗ ವಾರ್ತೆಗಳ ವಿವರ**

<><><>

**ಧಾರವಾಡ ಜಿಲ್ಲೆಯಾದ್ಯಂತ ಸುರಿದ, ಸತತ ಮಳೆಗೆ, ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ, ಸಮೀಕ್ಷೆ ಪೂರ್ವ ಅಂದಾಜಿನ ಪ್ರಕಾರ, 97 ಸಾವಿರದ 6 ನೂರಾ 12 ಹೆಕ್ಟರ್ ಪ್ರದೇಶದ ಬೆಳೆ ಹಾನಿಯಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯ ನೂತನ ಸಭಾಂಗಣದಲ್ಲಿ, ಕೃಷಿ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಮುಂದಿನ ಎರಡು ದಿನಗಳಲ್ಲಿ, ಸಮೀಕ್ಷೆ ಪೂರ್ಣಗೊಂಡು, ಹಾನಿಯ ನಿಖರ ಮಾಹಿತಿ ಲಭ್ಯವಾಗಲಿದೆ. ರೈತರಿಗೆ ಸಮರ್ಪಕ ಪರಿಹಾರ ಒದಗಿಸಲು, ಕ್ರಮ ಕೈಗೊಳ್ಳಲಾಗುವುದು ಎಂದು, ಸಚಿವ ಲಾಡ ಭರವಸೆ ನೀಡಿದರು.**

<><><>

**ಕೃಷಿ ಮೇಳ, ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನ, ನೂತನ ಬೆಳೆ ಪದ್ಧತಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಕುರಿತ, ಮಾಹಿತಿ ನೀಡುವ ಪ್ರಮುಖ ವೇದಿಕೆಯಾಗಿದೆ ಎಂದು, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ, ಸಂತೋಷ ಲಾಡ ಅವರು ಹೇಳಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಭವನದಲ್ಲಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಕೃಷಿ ಮೇಳದ ಪೂರ್ವಭಾವಿ ಸಭೆಯಲ್ಲಿ, ಮಾತನಾಡಿದರು. ನಿರಂತರ ಮಳೆಯಿಂದಾಗಿ, ಜಿಲ್ಲೆಯಲ್ಲಿ ಅಂದಾಜು, 1 ಲಕ್ಷ ಹೆಕ್ಟರ್ ಬೆಳೆ ನಾಶವಾದ ವರದಿ ಬಂದಿದೆ. ಈ**

ಕುರಿತು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು, ತಜ್ಞರು ಮತ್ತು ಕೃಷಿ ವಿದ್ಯಾರ್ಥಿಗಳು ಕ್ಷೇತ್ರ ಭೇಟಿ ಮೂಲಕ, ರೈತರಿಂದ ಕಾರಣ ತಿಳಿದು ಅಧ್ಯಯನ ಮಾಡಬೇಕು. ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು, ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂದರು.

<><><>

ಜಿಲ್ಲಾಧಿಕಾರಿ ದಿವ್ಯಾ ಪ್ರಭು ಮಾತನಾಡಿ, ಧಾರವಾಡ, ಹಾವೇರಿ, ಬೆಳಗಾವಿ, ಬಾಗಲಕೋಟೆ ಹಾಗೂ ಗದಗ ಜಿಲ್ಲೆಯಲ್ಲಿ, ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ ಎಂಬ ವರದಿ ಇದೆ. ಹಿರಿಯ ಕೃಷಿ ವಿಜ್ಞಾನಿಗಳು, ಅಧ್ಯಯನ ಕೈಗೊಂಡು, ರೈತರ ಮನೋಬಲ ಕಾಯಬೇಕು ಎಂದರು.

<><><>

ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಪಿ.ಎಲ್. ಪಾಟೀಲ ಮಾತನಾಡಿ, ಕೃಷಿ ಮೇಳ, ಸೆಪ್ಟೆಂಬರ 13 ರಿಂದ 16ರ ವರೆಗೆ, ನಾಲ್ಕು ದಿನಗಳ ಕಾಲ ಆಯೋಜಿಸಲಾಗಿದೆ. 'ಆಹಾರದ ಪೋ 'ಕಾಂಶಗಳು ಮತ್ತು ಮಣ್ಣು ಹಾಗೂ ತಳಿಗಳ ಬಗ್ಗೆ, ಕೃಷಿ ಸಂಸ್ಕರಣೆ' ಎಂಬ ವಿ 'ಯದ ಮೇಲೆ, ಕೃಷಿ ಮೇಳ ಕೇಂದ್ರೀಕರಿಸಿದೆ ಎಂದು ತಿಳಿಸಿದರು.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಉಡುಪು ಮತ್ತು ವಸ್ತ್ರ ವಿಜ್ಞಾನ ವಿಭಾಗ, ಬಾಳೆ ದಿಂಡಿನ ರಸವನ್ನು,ಹತ್ತಿ ಬಟ್ಟೆಯ ಗುಣಮಟ್ಟ ಹೆಚ್ಚಿಸಲು, ಮತ್ತು ಆ ಬಟ್ಟೆ ತೊಟ್ಟವರನ್ನು, ಸೂರ್ಯನ ನೇರಳಾತೀತ ಕಿರಣಗಳಿಂದ ರಕ್ಷಿಸಲು, ಕೈಗೊಂಡ ಸಂಶೋಧನೆಗೆ, ಹಕ್ಕು ಸ್ವಾಮ್ಯ 'ಪೇಟೆಂಟ್' ದೊರೆತಿದೆ. ಡಾಕ್ಟರ್ ಜೆ. ಸಣ್ಣಪಾಪಮ್ಮ ನೇತೃತ್ವದ ವಿಜ್ಞಾನಿಗಳ ತಂಡ, ರಾಜಪುರಿ, ಕೆಂಪು ಬಾಳೆ, ಏಲಕ್ಕಿ ಮತ್ತು ಜಿ–9 ಸೇರಿ, ನಾಲ್ಕು ತಳಿಯ ಬಾಳೆ ದಿಂಡುಗಳನ್ನು ಬಳಸಿ, ಕೈಗೊಂಡ ಪ್ರಯೋಗದಲ್ಲಿ, ಏಲಕ್ಕಿ ಬಾಳೆ ದಿಂಡಿನ ರಸದ ಪ್ರಯೋಗ, ಯಶಸ್ವಿಯಾಗಿದೆ ಎಂದು, ಉಪ ಕುಲಪತಿ ಡಾಕ್ಟರ್ ಪಿ.ಎಲ್.ಪಾಟೀಲ, ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ವಿವರ ನೀಡಿದ್ದಾರೆ, ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆ, ಕೃಷಿಕ ಮಹಿಳೆ ವಿಭಾಗದ, ಮುಖ್ಯಸ್ಥರಾದ ಡಾಕ್ಟರ್ ಜೆ.ಸಣ್ಣ ಪಾಪಮ್ಮ.

<><><>

ಡಾಕ್ಟರ್ ಜೆ.ಸಣ್ಣಪಾಪಮ್ಮ ಧ್ವನಿ 60 ಸೆಕೆಂದುಗಳು

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ನಾಡಿನಾದ್ಯಂತ ಗೌರಿ–ಗಣೇಶ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಮೊದಲ ಹಾಗೂ ಮೂರನೇ ದಿನದ ಗಣಪತಿ ವಿಗ್ರಹ ವಿಸರ್ಜನೆ ವೇಳೆ, ಪಟಾಕಿ ಸಿಡಿದು, ಓರ್ವ ಬಾಲಕ ಮೃತಪಟ್ಟು, 24ಕ್ಕೂ ಹೆಚ್ಚು ಜನರಿಗೆ ಗಾಯಗಳಾದ ಘಟನೆಗಳು ವಿವಿಧ ಜಿಲ್ಲೆಗಳಿಂದ ವರದಿಯಾಗಿವೆ. ಆ ಪೈಕಿ, 8ಕ್ಕೂ ಹೆಚ್ಚು ಮಕ್ಕಳ ಕಣ್ಣುಗಳಿಗೆ, ಗಂಭೀರ ಗಾಯಗಳಾಗಿವೆ.

<><><>

ಪಟಾಕಿ ಸ್ಫೋಟದ ಅವಘಡದಲ್ಲಿ ಗಾಯಗೊಂಡು, ದೊಡ್ಡಬಳ್ಳಾಪುರದ ಆದ್ಯ ಆಸ್ಪತ್ರೆಗೆ ದಾಖಲಾದವರ ಕುಶಲವನ್ನು, ಸಚಿವ ಕೆ.ಎಚ್. ಮುನಿಯಪ್ಪ, ವಿಚಾರಿಸಿದರು. ಪಟಾಕಿ ಸಂಗ್ರಹಣೆ ಮತ್ತು ಹಾರಿಸುವ ವೇಳೆ, ಮುನ್ನೆಚ್ಚರಿಕೆ ವಹಿಸುವಂತೆ ಮನವಿ ಮಾಡಿದರು.

<><><>

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳ, ತುರ್ತು ಚಿಕಿತ್ಸಾ ವಿಭಾಗದಲ್ಲಿ, ಪಟಾಕಿ ಸಿಡಿತದಿಂದ ಉಂಟಾದ ಗಾಯ, ಕಣ್ಣಿನ ಪೆಟ್ಟುಗಳ ಆರೈಕೆಗೆ, ಆರೋಗ್ಯ ಇಲಾಖೆ ವ್ಯವಸ್ಥೆ ಮಾಡಿದೆ.

<><><>

ಮಕ್ಕಳು ಪಟಾಕಿ ಸಿಡಿಸುವಾಗ ಅವಘಡ ಸಂಭವಿಸಿದರೆ, ಕೈಗೊಳ್ಳಬೇಕಾದ ಪ್ರಾಥಮಿಕ ಚಿಕಿತ್ಸೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿಯ ಡಾಕ್ಟರ್ ಎಂ.ಎಂ.ಜೋಶಿ ಕಣ್ಣಿನ ಆಸ್ಪತ್ರೆಯ, ಚಿಕ್ಕ ಮಕ್ಕಳ ಕಣ್ಣುಗಳ, ತಜ್ಞ ವೈದ್ಯೆ, ಡಾಕ್ಟರ್ ದೀಪ್ತಿ ಜೋಶಿ.

<><><>

ಡಾಕ್ಟರ್ ದೀಪ್ತಿ ಜೋಶಿ ಧ್ವನಿ 60 ಸೆಕೆಂದುಗಳು

<><><>

ಆಕಾಶವಾಣಿಯ, ಬಹುಶ್ರುತ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ 11 ಗಂಟೆಗೆ, ದೇಶ, ವಿದೇಶಗಳ ಭಾರತೀಯರೊಂದಿಗೆ ತಮ್ಮ ಮನದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್‌ನ 125ನೇ ಆವೃತ್ತಿಯಾಗಿದೆ. ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎ.ಐ.ಆರ್. ನ್ಯೂಸ್ ಜಾಲತಾಣ ಹಾಗೂ ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಸಹ, ಮನ್ ಕಿ ಬಾತ್ ಪ್ರಸಾರವಾಗಲಿದೆ.

<><><>

ಸ್ಥಿರಾಸ್ತಿ ನೋಂದಣಿಗೆ, ರಾಜ್ಯ ಸರ್ಕಾರ ಪರಿಷ್ಕರಿಸಿರುವಮುದ್ರಾಂಕ ಶುಲ್ಕ, ನೆರೆ ರಾಜ್ಯಗಳಿಗೆ ಹೋಲಿಸಿದರೆ, ಕಡಿಮೆ ಇದೆ ಎಂದು, ನೋಂದಣಿ ಮತ್ತು ಮುದ್ರಾಂಕ ಶುಲ್ಕ ಆಯುಕ್ತ ಮುಲ್ಲೈ ಮುಹಿಲನ್, ಬೆಂಗಳೂರಿನಲ್ಲಿ ಸ್ಪಷ್ಟ ಪಡಿಸಿದ್ದಾರೆ. ಇಂದಿನಿಂದ ಪರಿಷ್ಕೃತ, ನೂತನ ನೋಂದಣಿ ಹಾಗೂ ಮುದ್ರಾಂಕ ಶುಲ್ಕ ಜಾರಿಗೊಳ್ಳಲಿದ್ದು, ಇತರೆ ರಾಜ್ಯಗಳ ಶುಲ್ಕಗಳೊಂದಿಗೆ ಸಮೀಕರಿಸಿ, ನಿರ್ಧರಿಸಲಾಗಿದೆ ಎಂದು, ತಿಳಿಸಿದ್ದಾರೆ.

<><><>

ಮಾನಸಿಕ ಆರೋಗ್ಯ ಸುದೃಢವಾಗಿದ್ದರೆ, ಬದುಕು ನೆಮ್ಮದಿಯಿಂದ ಕೂಡಿರುತ್ತದೆ ಎಂದು, ಉಡುಪಿ ಜಿಲ್ಲಾಧಿಕಾರಿ ಟಿ.ಕೆ.ಸ್ವರೂಪಾ ಹೇಳಿದ್ದಾರೆ. ಮಣಿಪಾಲ್ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, 'ಏಕರೂಪದ ಮಾನಸಿಕ ಆರೋಗ್ಯ ನೀತಿ' ರೂಪಿಸುವ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದನ್ವಯ, ಜಿಲ್ಲೆಯ ಶಿಕ್ಷಣ ಸಂಸ್ಥೆಗಳಲ್ಲಿ ಏಕರೂಪದ ಮಾನಸಿಕ ಆರೋಗ್ಯ ನೀತಿಯನ್ನು ಅನುಷ್ಠಾನಗೊಳಿಸುವುದು, ಕಡ್ಡಾಯಗೊಳಿಸಲಾಗಿದೆ ಎಂದರು.

<><><>

ನಾಡಿನ ಸುಭೀಕ್ಷೆ ಹಾಗೂ ಹಿತದೃಷ್ಟಿಯಿಂದ, ನ್ಯಾಯಾಂಗಮತ್ತು ಮಾಧ್ಯಮ ಕ್ಷೇತ್ರವನ್ನು, ಬಲಪಡಿಸಬೇಕಾದ ಅಗತ್ಯವಿದೆ ಎಂದು, ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ ಹೇಳಿದ್ದಾರೆ. ರಾಯಚೂರು ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ, 'ಸಾರ್ವಜನಿಕ ಆಡಳಿತ ಮತ್ತು ಲೋಕಾಯುಕ್ತ ಕಾಯ್ದೆ, 1988ರ ಅಡಿಯಲ್ಲಿ, ವಕೀಲರ ಪಾತ್ರ' ವಿಷಯ ಕುರಿತು, ವಿಶೇಷ ಉಪನ್ಯಾಸ, ನೀಡಿದರು. ಜನ ಸಾಮಾನ್ಯರಿಗೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾ ರಂಗದ ಮೇಲೆ ವಿಶ್ವಾಸ ಮೂಡುವಂತೆ, ಲೋಕ ಹಿತದ ದೃಷ್ಟಿಕೋನ, ವೃತ್ತಿಪರರಲ್ಲಿ ಕಾಣಬೇಕು ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯಾದ್ಯಂತ ನಿರಂತರ ಮಳೆ; ಧಾರವಾಡ ಜಿಲ್ಲೆಯಲ್ಲಿ, ಅಂದಾಜು, 1 ಲಕ್ಷ ಹೆಕ್ಟರ್ ಬೆಳೆ ನಾಶ.
- ಸೆಪ್ಟೆಂಬರ್ 13 ರಿಂದ 16ರ ವರೆಗೆ, ಧಾರವಾಡ, ಕೃಷಿ ಮೇಳ.
- ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಉಡುಪು ಮತ್ತು ವಸ್ತ್ರ ವಿಜ್ಞಾನ ವಿಭಾಗಕ್ಕೆ, ಬಾಳೆ ದಿಂಡಿನ ಮೌಲ್ಯವರ್ಧನೆಗೆ, 'ಪೇಟೆಂಟ್' ಗರಿ.
- ಪ್ರಧಾನಮಂತ್ರಿ ಮೋದಿ ಅವರಿಂದ, ಇಂದು ಬೆಳಗ್ಗೆ 11 ಗಂಟೆಗೆ, ಆಕಾಶವಾಣಿ ಮೂಲಕ, 'ಮನ್ ಕಿ ಬಾತ್'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>